- 5 ಕಿ. ಗ್ರಾಂ ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಪೊದೆಗೆ ವರ್ಷಕ್ಕೊಮ್ಮೆ ನೀಡತಕ್ಕದ್ದು.
- ಪೊದೆ ಮೆಣಸನ್ನು 2 x 1.8 ಮೀ ಅಂತರದಲ್ಲಿ ತೆಂಗಿನ ತೋಟದಲ್ಲಿ ಅಂತರ ಬೆಳೆಯಾಗಿಯೂ ಬೆಳೆಯಬಹುದು.
- ಶೇ. 50ರ ನೆರಳು ಪರದೆಯ ಮನೆಯಲ್ಲಿ ಇದನ್ನು ಮೇಲೆ ತಿಳಿಸಿದ ಅಂತರದಲ್ಲಿ ನಾಟಿ ಮಾಡಿ ಒಳ್ಳೆಯ ಇಳುವರಿಯನ್ನು ಪಡೆಯಬಹುದು.
- ಇಲ್ಲಿ ಹೆಚ್ಚಿನ ಕವಲುಗಳು ಉತ್ಪಾದನೆಯಾಗುವುದರಿಂದ ಅವುಗಳಿಗೆ ಆಧಾರ ಕೊಡಲು ಚಿತ್ರದಲ್ಲಿ ತೋರಿಸಿದಂತೆ ಕಡ್ಡಿಗಳನ್ನು ಮತ್ತು ತಂತಿಯ ಸುರುಳಿಯನ್ನು ಉಪಯೋಗಿಸಿದರೆ ಇಳುವರಿ ಹೆಚ್ಚಿಸಲು ಸಾಧ್ಯವಾಗುತ್ತದೆ.
- ಕಾಳುಗಳನ್ನು ಕೊಯ್ಯುವುದು ಸುಲಭವಾದ್ದರಿಂದ ಕೇವಲ ಬಲಿತ ಹಣ್ಣುಗಳನ್ನು ಮಾತ್ರ ನಿರಂತರ ಕೊಯ್ಲು ಮಾಡಿ ಪೂರ್ತಿಯಾಗಿ ಬಿಳಿ ಮೆಣಸು ಅಥವಾ ಬೋಳು ಕಾಳುಗಳನ್ನು ತಯಾರಿಸಬಹುದು.



ತೆಂಗಿನ ತೋಟದಲ್ಲಿ ಬೆಳೆದ ಪೊದೆ ಮೆಣಸು

- ಸಸ್ಯ ಸಂರಕ್ಷಣಾ ಕ್ರಮ ಮತ್ತು ಕೊಯ್ಲಿಗೆ ತಗಲುವ ವೆಚ್ಚ ಕಡಿಮೆಯಾಗುವದರಿಂದ ಇದನ್ನು ಲಾಭದಾಯಕವಾಗಿ ಬೆಳೆಯಬಹುದು.

## ಸಸ್ಯ ಸಂರಕ್ಷಣೆ

- ಬೇರು ಕೊಳೆಯುವುದನ್ನು ತಡೆಗಟ್ಟಲು ಟ್ರೈಕೊಡರ್ಮಾ (10 ಗ್ರಾಂ/ಗಿಡಕ್ಕೆ) ಹಾಗೂ ವ್ಯಾಮ್ ಜೀವಾಣುಗಳು (100 ಸಿಸಿ/ಗಿಡಕ್ಕೆ) ಮಿಶ್ರಣದಲ್ಲಿ ಬೆರೆಸಬೇಕು.
- ಸೊರಗು ರೋಗವನ್ನು ನಿಯಂತ್ರಿಸಲು ಶೇ.1ರ ಬೋರ್ಡೋ ದ್ರಾವಣವನ್ನು ಮುಂಗಾರು ಮಳೆಯ ಮೊದಲು ಹಾಗೂ ಹಿಂಗಾರು ಮಳೆಯ ನಂತರ ಸಿಂಪರಣೆ ಮಾಡಿ 0.2% ಕಾಪರ್ ಆಕ್ಸಿಕ್ಲೋರೈಡ್‌ನಿಂದ ಬಳ್ಳಿಯ ಬುಡದ ಮಣ್ಣನ್ನು ನೆನೆಸಬೇಕು ಅಥವಾ ಪೊಟ್ಯಾಷಿಯಂ ಫಾಸ್ಫನೇಟ್ (3 ಮಿ. ಲೀ.) ಪ್ರತಿ ಲೀಟರ್‌ನಂತೆ ಸಿಂಪರಣೆ ಹಾಗೂ ಮಣ್ಣನ್ನು ತೋಯಿಸಬೇಕು.
- ಸಸ್ಯ ಜಂತುಗಳನ್ನು ನಿಯಂತ್ರಿಸಲು ಫೋರೇಟ್ (5ಗ್ರಾಂ) ಹರಳುಗಳನ್ನು ಪ್ರತಿ ಕುಂಡಕ್ಕೆ ಮೇ/ಜೂನ್ ಹಾಗೂ ಅಗಸ್ಟ್/ಸೆಪ್ಟೆಂಬರ್‌ನಲ್ಲಿ ನೀಡಬೇಕು.
- ಹಿಟ್ಟು ತಿಗಣೆ, ಥ್ರಿಪ್ಸ್, ಬಸವನ ಹುಳು ಹಾಗೂ ಕಂಬಳಿ ಹುಳುಗಳನ್ನು ನಿಯಂತ್ರಿಸಲು ಮೊನೊಕ್ರೊಟೊಫಾಸ್ (0.05%) ಅಥವಾ ಡೈಮಿಥೋಯೇಟ್ (0.05%) ರಷ್ಟು ಉಪಯೋಗಿಸಬೇಕು.

## ಇಳುವರಿ

- ಎರಡನೇ ವರ್ಷದಿಂದ ಪ್ರತಿ ಕುಂಡಕ್ಕೆ 300 ಗ್ರಾಂ ಒಣಗಿಸಿದ ಕಾಳಿನ ಇಳುವರಿ ಪಡೆಯಬಹುದು.
- ನಾಲ್ಕನೇ ವರ್ಷದಲ್ಲಿ ಪ್ರತಿ ಕುಂಡಕ್ಕೆ ಸುಮಾರು 1 ಕಿ. ಗ್ರಾಂ ಒಣ ಕಾಳುಗಳನ್ನು ಪಡೆಯಬಹುದು.


**ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,**
**ಬಾಗಲಕೋಟ**


# ಪೊದೆ ಕಾಳು ಮೆಣಸಿನ (ಬುಶ್ ಪೆಪ್ಪರ್) ಬೇಸಾಯ




**ಡಾ. ಲಕ್ಷ್ಮೀನಾರಾಯಣ ಹೆಗಡೆ**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಮತ್ತು

**ಡಾ. ಮಂಜು ಎಂ. ಜೆ.**
ಸಹಾಯಕ ಪ್ರಾಧ್ಯಾಪಕರು

ತೋಟಗಾರಿಕಾ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,
ಅಂಚೆ ಪೆಟ್ಟಿಗೆ ಸಂ. 23, ಬನವಾಸಿ ರಸ್ತೆ, ಶಿರಸಿ–581401(ಉ. ಕ.)
ಫೋನ್: 08384-226797/9480696391
ಮಿಂಚಂಚೆ: hrspepper@gmail.com





ಅಕ್ಟೋಬರ್, 2015

# ಪೊದೆ ಕಾಳುಮೆಣಸಿನ (ಬುಶ್ ಪೆಪ್ಪರ್) ಬೇಸಾಯ

ಕಾಳು ಮೆಣಸನ್ನು ಬಳ್ಳಿಯಂತೆ ಸಾಮಾನ್ಯವಾಗಿ ಮರಕ್ಕೆ ಹಬ್ಬಿಸಿ ಬೇಸಾಯ ಮಾಡುಲಾಗುತ್ತಿದೆ. ಹೀಗೆ ಬೆಳೆಸುವಾಗ ಹೂವು ಹಾಗೂ ಕಾಳುಗಳು ಪಾರ್ಶ್ವ ಕುಡಿಯಲ್ಲಿ ಕಂಡು ಬರುತ್ತವೆ. ಕಾಳು ಮೆಣಸಿನಲ್ಲಿ ಸಾಮಾನ್ಯವಾಗಿ ಸದಾ ಮೇಲಕ್ಕೆ ಹಬ್ಬುವ ತುದಿ ಕುಡಿ, ತಳಭಾಗದಲ್ಲಿ ಬೆಳೆಯುವ ಹರಿ ಬಳ್ಳಿ ಮತ್ತು ಕಾಳು ಅಥವಾ ಕರೆ ಬಿಡುವ ಪಾರ್ಶ್ವ ಕುಡಿಗಳೆಂದು ಮೂರು ತರಹದ ಕೊಂಬೆಗಳು ಬಿಡುತ್ತವೆ. ವಾಣಿಜ್ಯ ಮಟ್ಟದಲ್ಲಿ ಗಿಡಗಳನ್ನು ಪುನರುತ್ಪಾದನೆ ಮಾಡಲು ತುದಿಗುಡಿ ಅಥವಾ ಹರಿಬಳ್ಳಿಗಳನ್ನು ಬಳಸಲಾಗುತ್ತದೆ. ಆದರೆ ಪಾರ್ಶ್ವ ಕೊಂಬೆಗಳನ್ನು ಬಳಸಿದಾಗ ಕಾಳುಮೆಣಸು ಬಳ್ಳಿಯಾಗದೆ ಪೊದೆಯ ಆಕೃತಿಯನ್ನು ಹೊಂದುತ್ತದೆ. ಇತ್ತೀಚಿನ ದಿನಗಳಲ್ಲಿ ನಗರಗಳಲ್ಲಿ ಮತ್ತು ತುಂಡು ಜಮೀನನ್ನು ಹೊಂದಿದ ರೈತರೂ ಸಹ ತಮ್ಮ ಮನೆಯ ಉಪಯೋಗಕ್ಕೆ ಬೇಕಾದಷ್ಟು ಕಾಳು ಮೆಣಸನ್ನು ಬೆಳೆದು ಕೊಳ್ಳಲು ಪೊದೆ ಮೆಣಸಿನ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದನ್ನು ವಾಣಿಜ್ಯವಾಗಿ ಬೆಳೆಯಲು ಹೆಚ್ಚಿನ ಅವಕಾಶವಿದೆ.

ಪೊದೆ ಮೆಣಸು ನಾಟಿ ಮಾಡಿದ ವರ್ಷದಿಂದಲೇ ಹೂ ಬಿಡಲು ಆರಂಭಿಸುತ್ತದೆ. ಸರಿಯಾದ ಪ್ರಮಾಣದ ಗೊಬ್ಬರ ಹಾಗೂ ನೀರಾವರಿ ವ್ಯವಸ್ಥೆ ಮಾಡಿದಲ್ಲಿ ವರ್ಷಪೂರ್ತಿ ಹೂಬಿಡುತ್ತದೆ. ಪೊದೆ ಮೆಣಸನ್ನು 2 x 2 ಮೀ. ತಮ್ಮ ಕೈತೋಟಗಳಲ್ಲೂ ಬೆಳೆಸಬಹುದು. ಅಪಾರ್ಟ್‌ಮೆಂಟ್‌ಗಳಲ್ಲಿ ಹಾಗೂ ಸಾಂಪ್ರದಾಯಿಕ ಬೆಳೆ ಅಲ್ಲದ ಪ್ರದೇಶಗಳಲ್ಲಿ ಸಹ ಇದನ್ನು ದೊಡ್ಡ ಸಿಮೆಂಟಿನಿಂದ ತಯಾರಿಸಿದ ಕುಂಡಗಳಲ್ಲಿ ನೆಟ್ಟು ಬೆಳೆಯಬಹುದು.

## ತಳಿಗಳು

ಎಲ್ಲ ತರಹದ ತಳಿಗಳನ್ನು ಪೊದೆ ಮೆಣಸು ತಯಾರಿಸಲು ಉಪಯೋಗಿಸಬಹುದು. ಆದರೆ ಕರಿಮುಂಡಾ, ಪಣಿಯೂರ–1, ಕುದಿರವಳ್ಳಿ, ಕಲ್ಲುವಳ್ಳಿ, ಐಂಪೀರಿಯನ್ ಹಾಗೂ ಕೊಟ್ಟಾನಾಡನ್ ತಳಿಗಳನ್ನು ಬಳಸುವುದು ಹೆಚ್ಚು ಸೂಕ್ತವಾಗಿದೆ.

## ಕುಡಿಯ ತಯಾರಿಸುವ ವಿಧಾನ

ಒಂದು ವರ್ಷದ, ಆರೋಗ್ಯವಾದ, ಎರಡರಿಂದ ಮೂರು ಎಲೆ ಜೊತೆ ಸುಪ್ತ ಕಣ್ಣಿರುವ ಪಾರ್ಶ್ವ ಕುಡಿಗಳನ್ನು ಉಪಯೋಗಿಸಬೇಕು. ತೀರ ಎಳೆಯ ಹಾಗೂ ಅತೀ ಬಲಿತ ಕೊಂಬೆಗಳನ್ನು ಉಪಯೋಗಿಸ ಬಾರದು.



- ಹೆಚ್ಚು ಇಳುವರಿ ಕೊಡುವ, ಮೇಲೆ ತಿಳಿಸಿರುವ ತಳಿಗಳ ಆರೋಗ್ಯ ವಂತ ಸಾಮಾನ್ಯ ಬಳ್ಳಿಯ ಪಾರ್ಶ್ವ ಕೊಂಬೆ ಗಳನ್ನು ಬಳ್ಳಿಯಿಂದ ಕತ್ತರಿಸಿ ತೆಗೆದು ನೀರಿನ ಬಕೇಟ್‌ನಲ್ಲಿ ಇಡಬೇಕು.
- ಒಂದು ಜೊತೆ ಎಲೆಯ ಹೊರತು ಪಡಿಸಿ ಎಲ್ಲಾ ಎಲೆಗಳನ್ನು ತೆಗೆಯಬೇಕು.
- ಈ ಕೊಂಬೆಗಳನ್ನು 0.2% ಕಾಪರ್ ಆಕ್ಸಿಕ್ಲೋರೈಡ್‌ನಲ್ಲಿ 20-30 ನಿಮಿಷಗಳ ಕಾಲ ಅದ್ದಿದ ನಂತರ 2-4 ಗೆಣ್ಣುಗಳಷ್ಟು ಕತ್ತರಿಸಬೇಕು.
- ಬುಡದ ಒಂದು ಪಾರ್ಶ್ವದಲ್ಲಿ ಹರಿತವಾದ ಕತ್ತರಿಯಿಂದ ಚೂಪಾಗಿ ಕತ್ತರಿಸಿ ಅದನ್ನು 1000 ಪಿಪಿಎಂ ಬೇರು ಬರಿಸುವ ಚೋದಕದ (ಹಾರ್ಮೋನು) ಪುಡಿಯಲ್ಲಿ ಅದ್ದಬೇಕು.
- ಹೀಗೆ ತಯಾರಿಸಿದ 3-4 ಕಡ್ಡಿಗಳನ್ನು ಕಳಿತ ತೆಂಗಿನ ನಾರಿನ ಪುಡಿ ತುಂಬಿರುವ ಕೊಟ್ಟೆಯಲ್ಲಿ ನೆಟ್ಟು ನೆರಳಿನಲ್ಲಿ ಇಡಬೇಕು.
- ಹೆಚ್ಚಿನ ತೇವಾಂಶವಿರುವ ಪ್ಲಾಸ್ಟಿಕ್ ಗೂಡಿನಲ್ಲಿಯೂ (6X 4ಇಂಚು ಗಾತ್ರದ ಕೊಟ್ಟೆಯಲ್ಲಿ) ಇಡಬಹುದು.
- ಸುಮಾರು 35-50 ದಿನಗಳಲ್ಲಿ ಕಡಿಗಳಲ್ಲಿ 5-6 ಬೇರುಗಳು ಕಂಡುಬರುತ್ತವೆ.
- ನಂತರ ಕೊಟ್ಟೆಯ ಬಾಯನ್ನು ಬಿಚ್ಚಿ ಕಡ್ಡಿಗಳನ್ನು ಮಣ್ಣು, ಮರಳು ಹಾಗೂ ಕೊಟ್ಟಿಗೆ ಗೊಬ್ಬರವನ್ನು ಸಮ ಪ್ರಮಾಣದಲ್ಲಿ ತುಂಬಿರುವ ಕೊಟ್ಟೆಗಳಲ್ಲಿ ನೆಟ್ಟು 1-2 ತಿಂಗಳ ಕಾಲ ನೆರಳಿನಲ್ಲಿ ಇಡಬೇಕು.
- ಸುಮಾರು 12 ಇಂಚಿನ ಅಥವಾ ಅದಕ್ಕೂ ಹೆಚ್ಚಿನ ಗಾತ್ರದ ಕುಂಡಗಳಲ್ಲಿ ಈ ಗಿಡಗಳನ್ನು ನೆಡ ಬಹುದು.
- ಬ್ರೆಝಿಲ್ ಹಿಪ್ಪಲಿಯನ್ನು ಮೂಲ ಗಿಡವಾಗಿ ಪೊದೆ ಮೆಣಸಿನ ಕುಡಿಯನ್ನು ಬಳಸಿ ಕಸಿ ಪೊದೆ ಮೆಣಸಿನ ಗಿಡಗಳನ್ನೂ ತಯಾರಿಸಬಹುದು.
- ಸಾಮಾನ್ಯವಾಗಿ ಸೆಪ್ಟೆಂಬರ್–ಜನವರಿ ತಿಂಗಳಿನಲ್ಲಿ ಶೇ. 90 ರಷ್ಟು ಬೇರು ಬರುವ ಸಾಧ್ಯತೆ ಇದ್ದು, ಈ ತಿಂಗಳುಗಳಲ್ಲಿ ಕಡ್ಡಿಗಳನ್ನು ತಯಾರಿಸುವುದು ಸೂಕ್ತವಾಗಿದೆ.

## ಕುಂಡಗಳಲ್ಲಿ ಪೊದೆ ಮೆಣಸನ್ನು ಬೇಸಾಯ ಮಾಡುವ ವಿಧಾನ

- ಕೊಟ್ಟಿಗೆ ಗೊಬ್ಬರವನ್ನು ಮತ್ತು 1 ಗ್ರಾಂ ಸಾರಜನಕ, 0.5 ಗ್ರಾಂ ರಂಜಕ ಹಾಗೂ 2 ಗ್ರಾಂ ರಷ್ಟು ಪೊಟ್ಯಾಷ್‌ನ್ನು ಪ್ರತಿ 10 ಕಿ. ಗ್ರಾಂ ಮಣ್ಣು ಹಿಡಿಯುವ ಕುಂಡಕ್ಕೆ ಎರಡು ತಿಂಗಳಿಗೊಮ್ಮೆ ನೀಡಬೇಕು.
- ರಾಸಾಯನಿಕ ಗೊಬ್ಬರದ ಬದಲು ಬೇವಿನ ಹಿಂಡಿ (30 ಗ್ರಾಂ ಪ್ರತಿ ಕುಂಡಕ್ಕೆ) ಅಥವಾ ಶೇಂಗಾ ಹಿಂಡಿ (15 ಗ್ರಾಂ ಪ್ರತಿ ಕುಂಡಕ್ಕೆ), ಎಲೆ ಅಥವಾ ಎರೆಹುಳು ಗೊಬ್ಬರ (1 ಕಿ. ಗ್ರಾಂ ಪ್ರತಿ ಕುಂಡಕ್ಕೆ) ಎರಡು ತಿಂಗಳಿಗೊಮ್ಮೆ ಹಾಕಬೇಕು.
- ವಾಣಿಜ್ಯವಾಗಿ ಲಭ್ಯವಿರುವ ಗಾರ್ಡನ್ ಮಿಶ್ರಣವನ್ನು (10 ಗ್ರಾಂ 10 ಲೀ ನೀರಿನಲ್ಲಿ ಬೆರೆಸಿದ್ದು) 1-2 ಲೀಟರ್ ಪ್ರತಿ ಕುಂಡಕ್ಕೆ ಕೊಡಬೇಕು.

## ಪೊದೆ ಮೆಣಸಿನ ತೋಟ ಮಾಡುವ ವಿಧಾನ

- 3 ತಿಂಗಳಿಗೊಮ್ಮೆ 10 ಗ್ರಾಂ ಸಾರಜನಕ, 50 ಗ್ರಾಂ ರಂಜಕ ಹಾಗೂ 20 ಗ್ರಾಂ ಪೊಟ್ಯಾಷನ್ನು ಪ್ರತಿ ಪೊದೆಗೆ ಹಾಕಬೇಕು.